ಅಟ್ಟೆನ್ಬರೋ, ಸತ್ಯಜಿತ್ ರೇ, ಹಿಟ್ಲರ್, ಗಾಂಧಿ, ಮಂಡೇಲ ಎಲ್ಲರೂ ಬಂದುಹೋದರು. ಮಾತು ನಮ್ಮಿಬ್ಬರ ಹೆಸರುಗಳನ್ನು ಮಾತ್ರ ಹೇಳಲಿಲ್ಲ.

ಹುಣ್ಣಿಮೆ ರಾತ್ರಿಯಲ್ಲಿ ಅಲೆ ಬಂದು ತಮ್ಮನ್ನು ಮುಟ್ಟುವುದು ಬಹಳ ಇಷ್ಟವೆಂದು ಮರಳ ಕಣಗಳು ಮಾತನಾಡಿಕೊಂಡದ್ದು ಇಬ್ಬರಿಗೂ ಕೇಳಿಸಿತು.

ರೆಸ್ಟಾರೆಂಟಿಗೆ ಬಂದು ಕುಳಿತೆವು. ವೈನ್, ಒಂದಿಷ್ಟು ಊಟ ಹೇಳಿ ತುಂಬ ಸಮಯ ಕಾಡು ಹರಟೆ ಹೊಡೆಯುತ್ತ ಕುಳಿತಿದ್ದೆವು. ನಾನು ಬಿಲ್ ಕೊಡಲು ಹೋದಾಗ ಅವಳು ತಡೆದು, 'let us share' ಎಂದು ಹೇಳಿ ಬಿಲ್‌ನ ಅರ್ಧ ಹಣವನ್ನು ಕೊಟ್ಟಳು. ಬಾರ್ ಕೌಂಟರ್ ಬಳಿ ಹೋಗಿ ಒಂದು ವೈನ್ ಬಾಟಲ್ ತೆಗೆದು ನನ್ನ ಕಡೆ ತೋರಿಸುತ್ತ 'Do you like this brand, this is good' ಎಂದಳು. ವೈನ್ ಬಗ್ಗೆ ಹೆಚ್ಚು ತಿಳಿವಳಿಕೆ ಇಲ್ಲದ ನಾನು, 'I don't know anything about wine' ಎಂದ ನನ್ನ ಉತ್ತರಕ್ಕೆ ನಗುತ್ತ ಅವಳು ಅದನ್ನು ಕೊಂಡುಕೊಂಡಳು.

ನನ್ನ ಕಾಟೇಜಿನ ಬಳಿ ಬಂದಾಗ, ನಾನು ಬಾಗಿಲು ತೆರೆಯುವುದನ್ನೇ ಕಾಯುತ್ತ ಒಳಗೆ ಬಂದಳು. ಬಂದವಳು ರೂಂ ಸರ್ವಿಸನ್ನು ಇಂಟರ್‌ಕಾಮ್‌ನಲ್ಲಿ ಕರೆದು, ವೈನ್ ಗ್ಲಾಸ್, ವೈನ್ ಓಪನರ್ ಐಸ್ ಬಕ್ಕೆಟ್ ತರಲು ಹೇಳಿದಳು. ವೆಯ್ಟರ್ ತಂದು ಬಾಟಲಿಯನ್ನು ತೆರೆದು, ಎರಡು ಗ್ಲಾಸಿಗೆ ವೈನ್ ಸುರಿದು, ಬಾಟಲಿಯನ್ನು ಐಸ್ ಬಕೆಟ್ಟಿನಲ್ಲಿಟ್ಟು ಹೋದ. 'For us' ಎಂದು ಗ್ಲಾಸ್ ಎತ್ತಿ toast ಮಾಡಿ, ಸ್ಟೆಮ್ ಗ್ಲಾಸಿನ ತಳಭಾಗದ ಕಡ್ಡಿಯನ್ನು ಹಿಡಿದು, ಒಳಗಿರುವ ದ್ರವವನ್ನು ಒಂದು ಸುತ್ತು ಸುತ್ತಿ ಮೂಗಿನ ಹತ್ತಿರಕ್ಕೆ ತೆಗೆದುಕೊಂಡುಹೋಗಿ ವಾಸನೆಯನ್ನು ಆಸ್ವಾದಿಸಿ, ಮೆಲ್ಲಗೆ, ಒಂದು ಗುಟುಕು ಕುಡಿದಳು. ನಾನು ಅವಳ Swirl, Smell, Sipನ ನಾಜೂಕಾದ ಒನಪು ವಯ್ಯಾರಗಳಿಗೆ ಮರುಳಾಗಿ ಮುಗುಳ್ನಗುತ್ತಿದ್ದೆ.

'Do you like me?' ಕಕ್ಕಾಬಿಕ್ಕಿಯಾಗಿಸುವ ಪ್ರಶ್ನೆ.

ಇಷ್ಟು ನೇರ ಪ್ರಶ್ನೆಯನ್ನು ಹೇಗೆ ನಿಭಾಯಿಸ ಬೇಕೆಂದು ತಿಳಿಯದೆ, ನಿರಾಕರಿಸಲು ಆಗದೇ ತಬ್ಬಿಬ್ಬಾದೆ.

'ಇಲ್ಲ ಎಂದರೆ ಸುಳ್ಳಾದೀತು, ಆತ್ಮ ವಂಚನೆ!' ಎಂದೆ.

ಅವಳ ಜೋರು ನಗುವಿನಲ್ಲಿ ನನ್ನ ಮಾತಿಗಾದ ಮೆಚ್ಚುಗೆಯೂ, ಅವಳ ಬಗ್ಗೆಯ ಹೆಮ್ಮೆಯೂ ಕೇಳಿಸಿತು.

ಕೈಹಿಡಿದು ಮುತ್ತಿಟ್ಟಳು. ಗಂಟಲಲ್ಲಿ ಇಳಿಯುತ್ತಿದ್ದ ವೈನಿಗೆ ಅಮಲು ಹೆಚ್ಚಾಯಿತು. 'ಹುಷಾರು' ಎಂದು ತಲೆ ಎಚ್ಚರಿಸುತ್ತಿದ್ದರೂ, ದೇಹದ ಬಿಸಿಗೆ ಮನಸ್ಸು ಕರಗಿ ಹೋಯಿತು. ಮೆಲ್ಲಗೆ ಎದ್ದು ಬಂದು ಮಡಿಲಲ್ಲಿ ಕುಳಿತಳು. ಅಂತಹ ನೀಲಿ ಕಣ್ಣನ್ನು ಅಷ್ಟು ಹತ್ತಿರದಿಂದ ಎಂದೂ ನೋಡಿರಲಿಲ್ಲ. ಸಮುದ್ರದ ಅಲೆಯೊಂದು ಎದ್ದು ಬಂದು ಅಪ್ಪಳಿಸಿದಂತೆ ಇತ್ತು. ಮುಳುಗಿ ಹೋದೆ. ಹಣೆಗೆ ಮುತ್ತಿಟ್ಟಳು, ಕೂದಲಲ್ಲಿ ಬೆರಳಾಡಿಸಿದಳು. ಅವಳ ಬಾಯಿಂದ ಒಂದೆರಡು ಹನಿ ವೈನ್ ನನ್ನ ಬಾಯನ್ನು ಸಿಹಿ ಮಾಡಿತು. ಅವಳು ಮತ್ತಷ್ಟು ನೇರಳೆಯಾದಳು. ನನ್ನೊಳಗೆ ಕಾಡು, ಜಲಪಾತ, ಜ್ವಾಲಾಮುಖಿ, ಆಕಾಶ.

ತುಂಬು ಪ್ರೀತಿಯನ್ನು ತೆರೆದ ಮನಸ್ಸಿನಿಂದ ಪಡೆದುಕೊಳ್ಳುವಾಗ ಸಿಗುವ ಆನಂದಕ್ಕೆ ಎಲ್ಲೆಯಿಲ್ಲ. ಇಲ್ಲಿ ಇಬ್ಬರೂ ಕೊಡುವವರೇ ಇಬ್ಬರೂ ಪಡೆಯುವವರೇ. ಬೆಳಕಲ್ಲಿ ಬೆತ್ತಲೆ. ಬೆತ್ತಲೆಯಲ್ಲಿ ಬೆಳಕು. ಮಂಚ ನಾಚಿ ಕುಣಿಯಿತು. ಆ ಕ್ಷಣಗಳಲ್ಲಿ ಕೇಳಿಸಿದ್ದು ಉಸಿರಿನಲೆಯ ಏರಿಳಿತದ ಶಬ್ದ. ದಣಿದು